


# ಕೃಪೆ ತಂದ ವಿಜಯ


ಕಥೆ : ಸ್ವಾಮಿ ವಿಮೂರ್ತಾನಂದ

ಚಿತ್ರ : ಪದ್ಮವಾಸನ್

**1** ಶ್ರೀರಾಮಕೃಷ್ಣರು ಆಗ ದಕ್ಷಿಣೇಶ್ವರದಲ್ಲಿ ವಾಸವಾಗಿದ್ದರು. ಒಂದು ದಿನ ಮಥುರ ಬಾಬುವಿನ ಅರಮನೆಯಲ್ಲಿ ...




**2** ಹನುಮಾನ್ ಸಿಂಗ್ ದೇವಾಲಯದ ಬಾಗಿಲು ಕಾಯುತ್ತ, ಕುಸ್ತಿ ಸ್ಪರ್ಧೆಗಳಿಗೆ ಅಭ್ಯಾಸ ಮಾಡುತ್ತ ಕಠಿಣ ಶ್ರಮ ಪಡುತ್ತಿದ್ದ. ಬಿಡುವು ದೊರೆತಾಗಲೆಲ್ಲ ಅವನು ಹನುಮಂತನ ಮುಂದೆ ಪ್ರಾರ್ಥಿಸುತ್ತಿದ್ದ. ಬೆಳಿಗ್ಗೆ ಬೇಗನೆ ಎದ್ದು, ಅಭ್ಯಾಸ ಮಾಡಿದ ಬಳಿಕ ಹನುಮಂತನ ಧ್ಯಾನ ಮಾಡುತ್ತಿದ್ದ.





**3** ಶ್ರೀರಾಮಕೃಷ್ಣರನ್ನು ಭೇಟಿಯಾಗಲು ಬಹಳ ಮಂದಿ ದಕ್ಷಿಣೇಶ್ವರಕ್ಕೆ ಬರುತ್ತಿದ್ದರು. ಇದನ್ನು ನೋಡಿ...





4
ದೇವಾಲಯದ ಇತರ ಕೆಲಸಗಾರರಂತಲ್ಲದೆ, ಹನುಮಾನ್ ಸಿಂಗ್ ಶ್ರೀರಾಮಕೃಷ್ಣರ ಬಳಿಗೆ ಹೋಗಿ, ಅವರ ಅಮೃತದಂತಹ ಉಪದೇಶಗಳನ್ನು ಕೇಳುತ್ತಿದ್ದನು. ಒಂದು ದಿನ...
ನಿಮ್ಮ ಎಲ್ಲ ಜವಾಬ್ದಾರಿಯನ್ನೂ ದೇವರಿಗೆ ಅರ್ಪಿಸಿ. ನಿಮ್ಮ ಯೋಗ್ಯತೆಗೆ ತಕ್ಕಂತೆ ಅವನು ಯಾವುದು ಬೇಕೋ ಅದನ್ನು ನೀಡುವನು.
ಆಹಾ! ಎಂತಹ ಸುಂದರವಾದ ಉಪದೇಶ! ಅಂಜನೇಯಾ! ಇಂದಿನಿಂದ ನಾನು ನನ್ನನ್ನು ನಿನಗೆ ಅರ್ಪಿಸಿಕೊಳ್ಳುತ್ತೇನೆ.
5
ಹನುಮಾನ್ ಸಿಂಗ್ ಅತ್ಯುತ್ತಮ ಕುಸ್ತಿಪಟುವೆಂದು ಎಲ್ಲೆಡೆ ಹೆಸರುವಾಸಿಯಾದ. ಇದನ್ನು ತಿಳಿದು, ರತನ್ ಎಂಬ ಇನ್ನೊಬ್ಬ ಕುಸ್ತಿಪಟು ದಕ್ಷಿಣೇಶ್ವರಕ್ಕೆ ಬಂದ.
ಹನುಮಾನ್ ಸಿಂಗ್ ಎಂಬುವನೊಂದಿಗೆ ಕುಸ್ತಿ ಮಾಡಿ, ಅವನನ್ನು ಸ್ಪರ್ಧೆಯಲ್ಲಿ ಸೋಲಿಸಲು ನಾನು ಇಲ್ಲಿಗೆ ಬಂದಿದ್ದೇನೆ. ಅವನೆಲ್ಲಿದ್ದಾನೆ?
ಅವನು ಈಗ ಇಲ್ಲಿಲ್ಲ. ನಾಳೆ ಬೆಳಗ್ಗೆ ಅವನು ಬರುತ್ತಾನೆ.
ಈ ಭಾರಿ ದೃಢಕಾಯದ ದೈತ್ಯ ವ್ಯಕ್ತಿ ಹನುಮಾನ್ ಸಿಂಗ್‌ನನ್ನು ಸೋಲಿಸಿಯೇ ಬಿಡುತ್ತಾನೆ ಎಂದು ನನಗನ್ನಿಸುತ್ತದೆ.
6
ಮರುದಿನ ರತನ್ ದೇವಾಲಯಕ್ಕೆ ಬಂದ. ಹನುಮಾನ್ ಸಿಂಗ್‌ನನ್ನು ಭೇಟಿಯಾದ.
ನೀನು ಭಾರೀ ಕುಸ್ತಿಪಟು ಎಂದು ಎಲ್ಲರೂ ಹೇಳುತ್ತಾರೆ. ನಾನು ಯಾರು ಗೊತ್ತೆ ನಿನಗೆ? ನನ್ನೊಂದಿಗೆ ಕುಸ್ತಿ ಮಾಡಿದ ಎಲ್ಲರನ್ನೂ ನಾನು ಸೋಲಿಸಿದ್ದೇನೆ.
ಏನದ್ಭುತ! ನೀನು ಅಷ್ಟು ದೊಡ್ಡ ಕುಸ್ತಿಪಟು ವಾಗಿರುವುದು ನಿಜಕ್ಕೂ ಸಂತೋಷ.
ನಾನು ನಿನ್ನೊಂದಿಗೆ ಕೂಡ ಕುಸ್ತಿ ಮಾಡಬೇಕು. ನಿನಗೆ ನನ್ನ ಸಾಮರ್ಥ್ಯ ತೋರಿಸಬೇಕು. ಮುಂದಿನ ಶನಿವಾರ ನಾವು ಭೇಟಿಯಾಗೋಣ.
7
ಅಂದಿನಿಂದ ರತನ್ ಭಾರೀಪ್ರಮಾಣದ ಆಹಾರ ಸೇವನೆ ಮಾಡಿದ; ಹಲವು ಗಂಟೆಗಳ ಕಾಲ ಅಭ್ಯಾಸ ಮಾಡಿದ. ಅವನು ಅಭ್ಯಾಸ ಮಾಡುವುದನ್ನು ಊರಿಗೆ ಊರೇ ನೋಡಿತು.
ನಮ್ಮ ಹನುಮಾನ್ ಸಿಂಗ್ ಇವನನ್ನು ಸೋಲಿಸಬಲ್ಲನೆ? ಇವನು ತುಂಬಾ ಬಲಶಾಲಿಯಾಗಿ ಕಾಣಿಸುತ್ತಿದ್ದಾನೆ.

**8**

ಆದರೆ ಹನುಮಾನ್ ಸಿಂಗ್ ಶಾಂತನೂ, ಭಕ್ತಿಪರನೂ ಆಗಿದ್ದನು. ಎಲ್ಲ ಭಾರವನ್ನೂ ದೇವರ ಮೇಲೆ ಹಾಕಿದ್ದನು. ಇಡೀ ದಿನ ಉಪವಾಸ ಮಾಡಿ, ಸಾಯಂಕಾಲ ಸ್ವಲ್ಪ ಪ್ರಸಾದವನ್ನಷ್ಟೇ ತಿನ್ನುತ್ತಿದ್ದ. ತುಳಸೀವನದಲ್ಲಿ ಕುಳಿತು ಹನುಮಂತ ದೇವರ ಧ್ಯಾನ ಮಾಡುತ್ತ ಅವನು ಹೆಚ್ಚಿನ ಸಮಯ ಕಳೆಯುತ್ತಿದ್ದ.





**9** ದೇವಾಲಯದ ಇತರ ಕೆಲಸಗಾರರು ಈ ಕುಸ್ತಿಪಟುಗಳ ಬಗ್ಗೆ ಮಾತನಾಡಿಕೊಳ್ಳುತ್ತಿದ್ದರು...





**10** ಈ ವಾರ್ತೆ ಶ್ರೀರಾಮಕೃಷ್ಣರನ್ನು ತಲುಪಿತು. ದೇವರನ್ನು ಪ್ರಾಮಾಣಿಕವಾಗಿಯೂ ಪ್ರಾರ್ಥಿಸುತ್ತಿದ್ದವರ ಬಳಿಗೆ ಹೋಗಿ ಭೇಟಿ ಮಾಡಿ ಬರುತ್ತಿದ್ದರು ಶ್ರೀರಾಮಕೃಷ್ಣರು. ಅಂತೆಯೇ ಅವರು ಹನುಮಾನ್ ಸಿಂಗ್ ಬಳಿಗೆ ಹೋದರು.

**11**


ಹನುಮಂತನ ದರ್ಶನವನ್ನು ಪಡೆಯಲು ಶ್ರೀರಾಮಕೃಷ್ಣರು ಸಾಕಷ್ಟು ತಪಸ್ಸು ಮಾಡಿದ್ದರು. ಅದರ ಫಲವಾಗಿ ಅವರಿಗೆ ಹನುಮಂತನಿಗೆ ಇರುವಂತೆ ಒಂದು ಸಣ್ಣ ಬಾಲ ಕೂಡ ಬೆಳೆದಿತ್ತು! ಹನುಮಾನ್ ಸಿಂಗ್‌ನಿಗೆ ಈ ವಿಷಯ ಗೊತ್ತಿತ್ತು. ಹೀಗಾಗಿ ಶ್ರೀರಾಮಕೃಷ್ಣರನ್ನು ಕಂಡು ಅವನಿಗೆ ಉತ್ಸಾಹ ಉಕ್ಕಿ ಬಂತು.



**12** ಶ್ರೀರಾಮಕೃಷ್ಣರು ಹನುಮಾನ್ ಸಿಂಗ್‌ನೊಂದಿಗೆ ಸ್ವಲ್ಪ ಹೊತ್ತು ಮಾತನಾಡಿದರು...





**13** ಕೂಡಲೇ ಹನುಮಾನ್ ಸಿಂಗ್ ಶ್ರೀರಾಮಕೃಷ್ಣರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದ...




ಶ್ರೀರಾಮಕೃಷ್ಣರು ನಸುನಗುತ್ತ ಅವನನ್ನು ಆಶೀರ್ವದಿಸಿದರು. ಹನುಮಾನ್ ಸಿಂಗ್‌ನಿಗೆ ತುಂಬಾ ಆನಂದವುಂಟಾಯಿತು.

**14** ಅಂದು ಶನಿವಾರ. ಕಾಳಗವನ್ನು ನೋಡಲು ತುಂಬಾ ಮಂದಿ ನೆರೆದಿದ್ದರು. ಮಥುರ ಬಾಬುವೇ ಅವರ ತೀರ್ಪುದಾರ. ಹನುಮಾನ್ ಸಿಂಗ್ ಸೋಲುತ್ತಾನೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಆಧ್ಯಾತ್ಮಿಕ ಶಕ್ತಿಯ ಮುಂದೆ ದೈಹಿಕ ಶಕ್ತಿ ಹೇಗೆ ಗೆಲ್ಲುವುದು? ರತನ್ ಸೋತುಹೋದ... ಜೈ ಶ್ರೀರಾಮ್ !






ಓ ಹನುಮಾನ್ ! ನಿನ್ನಲ್ಲಿ ಶರಣಾದವರಿಗೆ ಜೀವನದ ಎಲ್ಲ ಸಂಪತ್ತುಗಳೂ ಲಭಿಸುವವು. ನೀನು ರಕ್ಷಿಸುತ್ತಿರುವಾಗ ಇನ್ನು ಹೆದರುವುದೇಕೆ?

*— ಹನುಮಾನ್ ಚಾಲೀಸಾ*